


ಕಥನಗಳೂ ಇವೆ. ಇವೆಲ್ಲವೂ ಭಾರತದ ಅರ್ಥವ್ಯವಸ್ಥೆ ಬೆಳೆದು ಬಂದ ದಾರಿಯನ್ನು ವಸ್ತುನಿಷ್ಠವಾಗಿ ನೋಡಲು ಸಹಾಯಕವಾಗುತ್ತವೆ. ಇದರಲ್ಲಿ ರಾಜಕೀಯ ವಿಚಾರಧಾರೆಯ ಪಾತ್ರ ಸಹಜವಾಗಿಯೇ ಇರುತ್ತದಾದರೂ, ವಿತ್ತೀಯ ಕ್ಷೇತ್ರದ ಪರಿಣಿತರೂ ಆ ಸ್ಥಾನವನ್ನಾಕ್ರಮಿಸಿ, ರಾಜಕೀಯ ತುರ್ತಿನಿಂದ ದೂರವಾಗಿ ಕೆಲಸ ಮಾಡಿದ್ದನ್ನು ನಾವು ಕಾಣಬಹುದು.

ನೆಹರೂ ಮತ್ತು ಇಂದಿರಾಗಾಂಧಿಯ ಕಾಲದಲ್ಲಿ ಸಮಾಜವಾದವೇ ಪ್ರಮುಖ ವಿಚಾರಧಾರೆಯಾಗಿತ್ತು. ಅದು ಸರಿಯಾದದ್ದಲ್ಲ ಎಂದು ವಾದಿಸುವವರು ಇದ್ದಾರೆ. ಆದರೆ ಇಂದಿನ ವಾಸ್ತವದ ದೃಷ್ಟಿಯಿಂದ ಹಿಂದಿನ ದಿನಗಳನ್ನು, ಅಂದಿನ ಪರಿಸ್ಥಿತಿಗಳಿಂದ ಹೊರಗಿಟ್ಟು ನೋಡುವುದು ಎಷ್ಟರ ಮಟ್ಟಿಗೆ ಸರಿಯಿರಬಹುದು? ಇದು ಸುಲಭದ ಪ್ರಶ್ನೆಯಲ್ಲ. ಆಹಾರ ಭದ್ರತೆಯಿಲ್ಲದ ದಿನಗಳಲ್ಲಿ; ದೇಶದ ಬಹುತೇಕ ಭಾಗಗಳಲ್ಲಿ ಆರ್ಥಿಕ ಬೆಳವಣಿಗೆಯಿಲ್ಲದ ಕಾಲದಲ್ಲಿ; ನಮ್ಮ ವ್ಯಾಪಾರ ಜಗತ್ತಿನಲ್ಲಿ ಹೂಡಿಕೆಯ ಅಭಾವವಿದ್ದ ಕಾಲದಲ್ಲಿ, ಮಾರುಕಟ್ಟೆಯ ಪದ್ಧತಿಯನ್ನು ಆಶ್ರಯಿಸುವುದು ಸರಿಯಿತ್ತೇ ಎನ್ನುವ ಪ್ರಶ್ನೆಯನ್ನು ಸರಳವಾಗಿ ಉತ್ತರಿಸುವುದಕ್ಕೆ ಆಗುವುದಿಲ್ಲ. ಸರ್ವತೋಮುಖ ಮತ್ತು ಎಲ್ಲರನ್ನೂ ಒಳಗೊಳ್ಳುವ ಬೆಳವಣಿಗೆ ಖಾಸಗಿ ವ್ಯಾಪಾರ ವ್ಯವಸ್ಥೆಯಿಂದ ಆಗುತ್ತಿರಲಿಲ್ಲ ಎನ್ನುವ ನಂಬಿಕೆ ಬಲವಾಗಿತ್ತು. ಒಂದೆಡೆ ಅಮೆರಿಕದ ವ್ಯಾಪಾರ ವ್ಯವಸ್ಥೆ ನಮ್ಮೆದುರಿಗಿತ್ತಾದರೂ, ಅದು ಒಂದು ಪರಿಪಕ್ವ ಪ್ರಜಾತಾಂತ್ರಿಕ ವ್ಯವಸ್ಥೆಯಾಗಿ ಮಾಗಿ ನಿಂತ ಅರ್ಥವ್ಯವಸ್ಥೆಯಂತೆ ಕಾಣುತ್ತಿತ್ತು. ಅದೇ ಕೇಂದ್ರೀಕೃತ ಯೋಜನಾ ವ್ಯವಸ್ಥೆಯನ್ನು ಸೋವಿಯತ್ ಸಂಘ ಪಾಲಿಸುತ್ತಿತ್ತು. ಆಂಗ್ಲರ ವ್ಯಾಪಾರಿ ವ್ಯವಸ್ಥೆಯಿಂದ ಪೀಡಿತರಾಗಿದ್ದ ನಮ್ಮ ಸ್ವಾತಂತ್ರ್ಯ ಹೋರಾಟಗಾರರು ಮಾರುಕಟ್ಟೆಯ ವ್ಯವಸ್ಥೆಯನ್ನು ಅನುಮಾನದಿಂದ ನೋಡಿದ್ದರಲ್ಲಿ ನಮಗೆ ಹೆಚ್ಚಿನ ಆಶ್ಚರ್ಯ ಆಗಬಾರದು.

ವಿತ್ತ ಮಂತ್ರಿಗಳು ತಮ್ಮ ಸ್ಥಾನವನ್ನು ಕಳೆದುಕೊಳ್ಳಲು ಕಾರಣಗಳೇನಿರಬಹುದು? ವಿಚಾರಧಾರೆಯೇ? ದಕ್ಷತೆಯೇ? ಭ್ರಷ್ಟಾಚಾರವೇ? ಭಿನ್ನಾಭಿಪ್ರಾಯಗಳೇ? ಈ ಪ್ರಶ್ನೆಗಳನ್ನು ಭಟ್ಟಾಚಾರ್ಯ ನೇರವಾಗಿ ಕೇಳುವುದಿಲ್ಲ. ಆದರೆ ರಾಷ್ಟ್ರದ ಮೊದಲ ವಿತ್ತ ಮಂತ್ರಿಗಳಾದ ಆರ್. ಕೆ. ಷಣ್ಮುಖಂ ಚೆಟ್ಟಿಯವರ ವಿಷಯಕ್ಕೆ ಬಂದಾಗ, ಇವು ಯಾವುವೂ ಅಲ್ಲದೇ ಸಂಸತ್ತಿನ ಪರಂಪರೆಗೆ ಅಪಮಾನ ಮಾಡಿದರೆನ್ನುವ ಭಾವನೆಯ ಮೇಲೆ ಅವರು ರಾಜೀನಾಮೆ ಕೊಡಬೇಕಾಯಿತು. ಚೆಟ್ಟಿ ಕಾಂಗ್ರೆಸ್ ಪಕ್ಷದವರಲ್ಲ. ಅವರು ಸ್ವರಾಜ್ ಪಕ್ಷಕ್ಕೆ ಸೇರಿದವರು. ಕಾಂಗ್ರೆಸ್ ಪಕ್ಷವನ್ನು ಕಟುವಾಗಿ ಟೀಕಿಸುತ್ತಿದ್ದರಾದರೂ, ಅವರ ದಕ್ಷತೆಯನ್ನು ನೆಹರೂ ಗುರುತಿಸಿ ವಿತ್ತ ಮಂತ್ರಿಗಳಾಗಿ ನೇಮಿಸಿದ್ದರು. ಅವರ ನಡುವೆ ಸೈದ್ಧಾಂತಿಕವಾಗಿ ಭಿನ್ನಾಭಿಪ್ರಾಯಗಳಿದ್ದದ್ದು ವಿದಿತವಾಗಿತ್ತು. ಆದರೂ ಅದು ವಿತ್ತಮಂತ್ರಿಗಳು ತಮ್ಮ ಕಾರ್ಯವನ್ನು ಮುಂದುವರೆಸಲು ಅಡ್ಡಬಂದಿರಲಿಲ್ಲ. ಕಡೆಗೂ ಅವರನ್ನು ಬಲಿ ತೆಗೆದುಕೊಂಡದ್ದು ಸರ್ಕಾರ ಮತ್ತು ವ್ಯಾಪಾರದ ನಡುವಿನ ಸಂಬಂಧ ಹೇಗಿರಬೇಕು ಎನ್ನುವ ವಿಚಾರ. ವ್ಯಾಪಾರ ಜಗತ್ತು ಸರ್ಕಾರಗಳನ್ನು ನೇರವಾಗಿ ಅಥವಾ ಪರೋಕ್ಷವಾಗಿ ಪ್ರಭಾವಿಸುತ್ತಿರುವುದನ್ನು ನಾವು ಆ ಕಾಲದಿಂದಲೇ ನೋಡಬೇಕು. ಆದಾಯ ತೆರಿಗೆಯ ತನಿಖೆಗೆ ಒಂದು ಆಯೋಗವನ್ನು ನೇಮಿಸುವ ಬಗ್ಗೆ, ಮತ್ತು ಆ ಆಯೋಗ ಎಷ್ಟು ಹಿಂದಕ್ಕೆ ಹೋಗಿ ತನಿಖೆಯನ್ನು ಮಾಡಬಹುದು ಎನ್ನುವ ವಿಷಯದಲ್ಲಿ ತೀವ್ರ ಭಿನ್ನಾಭಿಪ್ರಾಯಗಳು ಉಂಟಾದುವು. ವಲ್ಲಭಭಾಯಿ ಪಟೇಲ್ ಕೆಲವು ಗುಜರಾತಿ ವ್ಯಾಪಾರಸ್ಥರ ಕಾಳಜಿಗಳನ್ನು ನೆಹರೂಗೆ ತಿಳಿಸಿದ್ದರು. ಸದನದಲ್ಲಿ ಕಾನೂನಿನ ಸುಧಾರಣೆಯಾಗುತ್ತಿದ್ದ ಕಾಲದಲ್ಲಿ ಪ್ರಸ್ತಾವಿತ ಕಾನೂನಿಗೆ ವಿರುದ್ಧವಾಗಿ ಕೆಲವು ವ್ಯಾಪಾರಿ ಸಂಸ್ಥೆಗಳ ಮೇಲೆ ಆಗುತ್ತಿದ್ದ ತನಿಖೆಯನ್ನು ಹಿಂದೆಗೆದುಕೊಳ್ಳುವ